ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ಗುರುತಿಸಲ್ಪಟ್ಟ ಮಾಜಿ ದೇವದಾಸಿ ಮಹಿಳೆಯರ ಜಿಲ್ಲಾವಾರು ವಿವರ ಈ ಕೆಳಕಂಡಂತಿರುತ್ತದೆ :

ಕ್ರ. ಸಂ.	ಜಿಲ್ಲೆಯ ಹೆಸರು	1993-94ನೇ ಸಾಲಿನಲ್ಲಿ ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟ ಮಾಜಿ ದೇವದಾಸಿಯರ ಸಂಖ್ಯೆ	2007-08ನೇ ಸಾಲಿನಲ್ಲಿ ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟ ಮಾಜಿ ದೇವದಾಸಿಯರ ಸಂಖ್ಯೆ	2007-08ನೇ ಸಾಲಿನಲ್ಲಿ ಸಮೀಕ್ಷೆ ನಡೆಸಿದ ನಂತರ ಮರಣ/ವಲಸೆ/ ದೇವದಾಸಿ ಅಲ್ಲದವರು, ದ್ವಿಗುಣಗೊಂಡಿ-ರುವವರು ಮತ್ತು ಕಡಿಮೆ ವಯಸ್ಸಿನವರ ಸಂಖ್ಯೆ	2007-08ನೇ ಸಾಲಿನಲ್ಲಿನ ಮರು ಸಮೀಕ್ಷೆಯನ್ನು ಮರು ಪರಿಶೀಲಿಸಿದ ನಂತರ ಬಾಕಿ ಉಳಿದವರ ಸಂಖ್ಯೆ
1.	ಗುಲ್ಬರ್ಗಾ	991	1798	175	1623
2.	ರಾಯಚೂರು	2494	1662	207	1455
3.	ಧಾರವಾಡ	481	395	113	282
4.	ಹಾವೇರಿ	617	450	77	373
5.	ಬಾಗಲಕೋಟೆ	4804	4942	1919	3023
6.	ಕೊಪ್ಪಳ	4880	1758	603	1155
7.	ಬಿಜಾಪುರ	1964	2776	637	2139
8.	ಬಳ್ಳಾರಿ	1635	9154	1056	8098
9.	ಬೆಳಗಾವಿ	3600	1361	237	1124
10.	ಗದಗ	1407	1520	27	1493
11.	ಚಿತ್ರದುರ್ಗ	0	418	12	406
12.	ಶಿವಮೊಗ್ಗ	0	27	3	24
13.	ದಾವಣಗೆರೆ	0	2620	28	2592
14.	ಬೀದರ್	0	0	0	0
	ಒಟ್ಟು	22873	28881	5094	23787

2. ವಿಷಯ : ಬೀದರ್ ಜಿಲ್ಲೆಯ ಬಾಲಕನೊಬ್ಬನಿಗೆ ವಿಕ್ಟೋರಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಸಿಗದಿರುವ ಬಗ್ಗೆ ಉದಯವಾಣಿಯಲ್ಲಿ ಪ್ರಕಟವಾಗಿರುವ ವರದಿ ಬಗ್ಗೆ.

ಶ್ರೀ ಬಂಡೆಪ್ಪ ಕಾಶೆಂಪೂರ (ಬೀದರ್ ದಕ್ಷಿಣ) : ನಾನು ಆರೋಗ್ಯ ಸಚಿವರ ಗಮನಕ್ಕೆ ತರಬಯಸುವುದೇನೆಂದರೆ, ಬೀದರ್ ಜಿಲ್ಲೆಯ ಬಾಲಕನೊಬ್ಬ ವಿಕ್ಟೋರಿಯ ಆಸ್ಪತ್ರೆಗೆ admit ಆಗಿ ತೊಂದರೆಯಾಗಿರುವ ಬಗ್ಗೆ 2ನೇ ತಾರಿಖಿನ ಉದಯವಾಣಿಯಲ್ಲಿ ಒಂದು ವರದಿ ಬಂದಿದೆ. 'ಕೈ ಮುರಿದ ಬಾಲಕನಿಗೆ ಸಿಗದ ಚಿಕಿತ್ಸೆ' ಎಂದು ಆ ಪತ್ರಿಕೆಯವರು lead news ಮಾಡಿದ್ದಾರೆ. 'ಬಾಲಕನ ಕೈ ಕತ್ತರಿಸಲು 1.5 ಲ್ಷಕ ರೂ.ಗಳನ್ನು ಕೇಳಿದ ಆಸ್ಪತ್ರೆ, ಆಸ್ಪತ್ರೆಗೆ ಅಲೆದಾಡಿಸಿದ ಸಮರ್ಥ ಆಸ್ಪತ್ರೆಗಳು, ಸ್ಪರ್ಶ ಆಸ್ಪತ್ರೆ' ಎಂದು ವರದಿಯಾಗಿದೆ. ತಾವು ವಾಜಪೇಯಿ ಶ್ರಿ ಯೋಜನೆ ಮಾಡಿದ್ದೀರಿ. ಈ ಹುಡುಗನ ಮನೆಯವರ ಹತ್ತಿರ ಬಿಪಿಎಲ್ ಕಾರ್ಡ್ ಇದೆ. Approval ಮತ್ತಿತ್ತರ ವಿಷಯಗಳಿಂದ ಬಹಳಷ್ಟು ಸಮಸ್ಯೆಯಾಗುತ್ತಿದೆ. ನಮ್ಮ ಭಾಗದಿಂದ ಬರುವ ಬಹಳಷ್ಟು ಜನರಿಗೆ ಚಿಕಿತ್ಸೆ ಸಿಕ್ಕಿದೆ. ಕೆಲವು ಸಲ ನಿಮಗೂ, ಅವರಿಗೂ ಮಾತನಾಡಿ ಆಗಿಂದಾಗ್ಗೆ approval ಮಾಡಿಸಿ ಸುಮಾರು case ಎಲ್ಲ ಮಾಡಿದ್ದೀರಿ. ಆದರೆ, ಈ ರೀತಿ ಹಲವಾರು ಕೇಸುಗಳಿವೆ. 700 ಕಿ.ಮೀ. ದೂರದಿಂದ ಇಲ್ಲಿಗೆ ಬಂದು ತಿಂಗಳಾನುಗಟ್ಟಲೆ ಇರುವುದು ಸಮಸ್ಯೆಯಾಗಿದೆ. ಬಹಳಷ್ಟು ತೊಂದರೆಯಾಗುತ್ತಿದೆ. ಆದ್ದರಿಂದ, ತಾವು ಈ ಬಗೆ ಗಮನಹರಿಸಬೇಕು. ಆ ಬಾಲಕನ ಹತ್ತಿರ ತಮ್ಮ ಅಧಿಕಾರಿಗಳನ್ನು ಕಳುಹಿಸಿ immediate ಆಗಿ ಅದನ್ನು attend ಮಾಡಿಸಿ. ಇದೊಂದು ದೊಡ್ಡ news ಆಗಿದೆ. ಆ ಮಗು ಬಡವರ ಮಗು ಆಗಿದೆ. ತಾವು ಆ ಬಗ್ಗೆ immediate ಆಗಿ action ತೆಗೆದುಕೊಳ್ಳಬೇಕೆಂದು ಮಾನ್ಯ ಆರೋಗ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ರಾಜ್ಯ ಸರ್ಕಾರವು ಜಾರಿಗೆ ತಂದಿರುವ ವಾಜಪೇಯಿ ಆರೋಗ್ಯ ಶ್ರೀ ಯೋಜನೆಯಡಿಯಲ್ಲಿ ಹೃದ್ರೋಗ, ಕ್ಯಾನ್ಸರ್, ನರರೋಗ, ಮೂತ್ರ ಪಿಂಡದ ತೊಂದರೆ, ಸುಟ್ಟ ಗಾಯ, ಅಪಘಾತ ಹಾಗೂ ನವಜಾತ ಶಿಶುಗಳಿಗೆ ಸಂಬಂಧಿಸಿದ ವಿಶೇಷ ಪ್ರಕರಣಗಳಲ್ಲಿ ಕೆಲವು ನಿರ್ದಿಷ್ಟ ರೀತಿಯ ಶಸ್ತ್ರ ಚಿಕಿತ್ಸೆ ಸೌಲಭ್ಯಗಳು ದೊರೆಯುತ್ತವೆ. ಸಾಧಾರಣ ಗಾಯ ಮೂಳೆ ಮುರಿತ ಈ ಯೋಜನೆ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ.

ಆರೋಗ್ಯ ಕವಚ 108 ಯೋಜನೆಯು ವೈದ್ಯಕೀಯ ತುರ್ತು ಪರಿಸ್ಥಿತಿಯಲ್ಲಿ ರೋಗಿಗಳನ್ನು ಸಮೀಪದ ಆಸ್ಪತ್ರೆಗೆ ಕೊಂಡೊಯ್ಯವ ಯೋಜನೆಯಾಗಿದ್ದು ಆಸ್ಪತ್ರೆಗೆ ಸೇರಿಸುವ ಮುನ್ನ ಪ್ರಥಮೋಪಚಾರ ಚಿಕಿತ್ಸೆ ನೀಡಲಾಗುತ್ತದೆ.

ದಿನಾಂಕ : 2-7-2010 (ಶುಕ್ರವಾರ) ರಂದು ಉದಯವಾಣಿಯಲ್ಲಿ ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ವರದಿಯೊಂದು ಪ್ರಕಟವಾಗಿತ್ತು. ಇದನ್ನು ಗಮನಿಸಿದ ನಾನು

ಬಾಲಕ ಮತ್ತು ಅವನ ಪೋಷಕರನ್ನು ಖುದ್ದಾಗಿ ನನ್ನ ನಿವಾಸದಲ್ಲಿ ಭೇಟಿಯಾಗಿ ಅವರ ಸಮಸ್ಯೆಯನ್ನು ಆಲಿಸಿ ಪ್ರಕರಣವನ್ನು ಮಾನವೀಯವಾಗಿ ಪರಿಗಣಿಸಿ ಮಗುವಿಗೆ ಉಚಿತವಾಗಿ ಚಿಕಿತ್ಸೆ ನೀಡಬೇಕೆಂದು ವಿಕ್ಟೋರಿಯ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ. ತಿಲಕ್ ರವರಿಗೆ ದೂರವಾಣಿ ಮೂಲಕ ಹಾಗೂ ಲಿಖಿತವಾಗಿ ತಿಳಿಸಿರುತ್ತೇನೆ. ಈ ಹಿಂದೆ ಇದೇ ಬಾಲಕನನ್ನು ವಿಕ್ಟೋರಿಯ ಆಸ್ಪತ್ರೆಗೆ ದಾಖಲಿಸಿದ್ದು ಅವನಿಗೆ ಶಸ್ತ್ರಚಿಕಿತ್ಸೆಯನ್ನು ಮಾಡಲಾಗಿರುತ್ತದೆ. ಈಗಲೂ ಸದರಿ ಬಾಲಕನು ಒಳರೋಗಿಯಾಗಿ ಚಿಕಿತ್ಸೆಯನ್ನು ಪಡೆಯುತ್ತಿದ್ದು ವೈದ್ಯರುಗಳು ದಿನಾಂಕ: 6–7–2010 ರಂದು ಮತ್ತೊಂದು ಶಸ್ತ್ರಚಿಕಿತ್ಸೆಯನ್ನು ಮಾಡಲು ನಿರ್ಧರಿಸಿರುತ್ತಾರೆ.

ಬಾಲಕನ ಸಂಕಷ್ಟಕ್ಕೆ ಸ್ಪಂದಿಸಿದ ಸಚಿವ ಶ್ರೀರಾಮುಲು

ಉದಯವಾಣಿ ವರದಿ ಫಲಶ್ರುತಿ

ಬೆಂಗಳೂರು ಜು. 2 ಕೈ ಮುರಿದುಕೊಂಡು ಸೂಕ್ತ ಚಿಕಿತ್ಸೆ ಸಿಗದೇ ಕಂಗಾಲಾಗಿದ್ದ ಬಾಲಕ ರತಿಕಾಂತ್‌ನ ನೆರವಿಗೆ ಆರೋಗ್ಯ ಸಚಿವ ಶ್ರೀರಾಮುಲು ಮುಂದಾಗುವ ಮೂಲಕ ಮಾನವೀಯತೆ ಮೆರೆದಿದ್ದಾರೆ.

ಈ ಸಂಬಂಧ ಶುಕ್ರವಾರ ಉದಯವಾಣಿ ಯಲ್ಲಿ ಸುದ್ದಿ ಪ್ರಕಟಗೊಂಡಿತ್ತು. ಜತೆಗೆ ಬಾಲಕ ಹಾಗೂ ಆತನ ಪೋಷಕರು ಇಂದು ಆರೋಗ್ಯ ಸಚಿವ ಶ್ರೀರಾಮುಲು ಅವರನ್ನು ಭೇಟಿಯಾಗಿ ಸಮಸ್ಯೆಯನ್ನು ಮನವರಿಕೆ ಮಾಡಿಕೊಟ್ಟ ಬಳಿಕ ಸಚಿವರು ಚಿಕಿತ್ಸೆಗೆ ನೆರವಾಗಿದ್ದಾರೆ.

ಪ್ರಕರಣವನ್ನು ಮಾನವೀಯವಾಗಿ ಪರಿಗಣಿಸಿ ಮಗುವಿಗೆ ಉಚಿತವಾಗಿ ಚಿಕಿತ್ಸೆ ನೀಡಬೇಕು ಎಂದು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಕೀಯ ಅಧಿಕ್ಷಕ ಡಾ. ತಿಲಕ್ ಅವರಿಗೆ ಪತ್ರ ಬರೆದು ಆದೇಶಿಸಿದ್ದಾರೆ.

ಶ್ರೀ ಬಿ. ಶ್ರೀರಾಮುಲು: ಈಗಾಗಲೇ ಸದರಿ ಬಾಲಕನಿಗೆ ಸುಮಾರು 6 ಸಲ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ಇವತ್ತು ಇನ್ನೊಂದು ಶಸ್ತ್ರಚಿಕಿತ್ಸೆ ಮಾಡುತ್ತಿದ್ದಾರೆ. ಆ ಬಾಲಕನನ್ನು ಕರೆದು ನಾನು ಮಾತವಾಡಿದ್ದೇನೆ. ಆ ಬಾಲಕ admit ಆಗುವ ಸಮಯದಲ್ಲಿ ಅಂದರೆ 2ನೇ ತಾರೀಖು ಉದಯವಾಣಿ ದಿನಪತ್ರಿಕೆಯಲ್ಲಿ ವರದಿ ಪ್ರಕಟವಾಗಿತ್ತು. ಪುನಃ ನಾನು ವಿಕ್ಟೋರಿಯಾ ಆಸ್ಪತ್ರೆಗೆ ಪತ್ರ ಬರೆದು ಆ ಮಗುವನ್ನು ನಾನೇ ಕರೆಸಿಕೊಂಡು ಮಾತನಾಡಿ ನಂತರ ಎಲ್ಲ ರೀತಿಯಲ್ಲಿ ಆ ಸವಲತ್ತುಗಳನ್ನು ಕೊಡುತ್ತಿದ್ದೇವೆ. ನಂತರ ಜೊತೆಯಲ್ಲಿ ಆ ಮಗು ಬರುವ ಸಮಯದಲ್ಲಿ ಆ ಮಗುವಿಗೆ ಅಲ್ಲಿ ಕೈಮುರಿದ ನಂತರ ಗ್ಯಾಂಗರಿನ್ ಕೂಡ ಆ ಮಗುವಿಗೆ ಆಗಿತ್ತು. ಕೈ ತೆಗೆಯಬೇಕೆಂದು ಡಾಕ್ಟರ್ ಕೂಡ ಸಲಹೆ ಕೊಟ್ಟಿದ್ದರು.

ಆ ಮಕ್ಕಳು ಕೇಳಿದ್ದಕ್ಕೋಸ್ಕರ ಆರು ಶಸ್ತ್ರ ಚಿಕಿತ್ಸೆ ಮಾಡಲಾಗಿದೆ. ಆ ಬಾಲಕ ಬಹುಶಃ ಗುಣಮುಖನಾಗಬಹುದು. ನಾನು ಆ ಫೋಟೋವನ್ನು ತಮಗೆ ಕಳುಹಿಸಿಕೊಡುತ್ತೇನೆ.

3. ವಿಷಯ : ಸರ್ಕಾರೀ ಸಾಮ್ಯದ ಮಂಡ್ಯ ಮೈಶುಗರ್ ಕಾರ್ಖಾನೆಯ ಕಬ್ಬನ್ನು ಬೆಳೆದ ರೈತರಿಗೆ ಬೆಂಬಲ ಬೆಲೆ ಕುರಿತು.

ಶ್ರೀ ಎಂ. ಶ್ರೀನಿವಾಸ (ಮಂಡ್ಯ) : ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯಲ್ಲಿ 50 ಲಕ್ಷ ಟನ್ ಕಬ್ಬು ಬೆಳೆದು ನಿಂತಿದೆ. 5 ಸಕ್ಕರೆ ಕಾರ್ಖಾನೆಗಳು ಕಬ್ಬನ್ನು ಅರೆಯಬೇಕಾಗಿದೆ. ಕಾರ್ಖಾನೆಗಳು ಕಳೆದ ತಿಂಗಳಿನಲ್ಲಿಯೇ ಕಬ್ಬನ್ನು ಅರೆಯುವುದಕ್ಕೆ ಪ್ರಾರಂಭಿಸಬೇಕಾಗಿತ್ತು. ದರ ನಿಗದಿಯಾಗದೆ ಅದನ್ನು ಮುಂದೂಡಲಾಗಿದೆ. ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿಯವರು ಕಳೆದ ತಿಂಗಳು ಸಭೆ ಸೇರಿ 5 ಜುಲೈ ಒಳಗಡೆ ದರ ನಿಗದಿಪಡಿಸದಿದ್ದರೆ ಹೋರಾಟ ಹಾದಿಯನ್ನು ಹಿಡಿಯುವ ಎಚ್ಚರಿಕೆ ಕೊಟ್ಟಿದ್ದರು. ನಮ್ಮ ಮೈಶುಗರ್ ಕಾರ್ಖಾನೆ ಸರ್ಕಾರಿ ಸ್ವಾಮ್ಯದ ಕಾರ್ಖಾನೆಯಾಗಿದೆ. ಮಾನ್ಯ ಮುಖ್ಯಮಂತ್ರಿಯವರು ಮಧ್ಯೆ ಪ್ರವೇಶ ಮಾಡಿ ಎಲ್ಲಾ ವರ್ಷಗಳಲ್ಲೂ ದರ ನಿಗದಿಪಡಿಸುತ್ತಿದ್ದರು. ಆದರೆ, ಇದುವರೆಗೂ ಮಾನ್ಯ ಮುಖ್ಯಮಂತ್ರಿಯವರಾಗಲಿ, ಸಂಬಂಧಪಟ್ಟ ಮಂತ್ರಿಯವರಾಗಲಿ ಈ ಬಗ್ಗೆ ಯಾರೂ ಆಲೋಚನೆ ಮಾಡಲಿಲ್ಲ ಮತ್ತು ದರ ನಿಗದಿಪಡಿಸಲಿಲ್ಲ. ಇದಲ್ಲದೆ ಕಳೆದ ಬಾರಿ ನುರಿದ ಕಬ್ಬಿಗೆ ಮಂಡ್ಯ ಜಿಲ್ಲಾಧಿಕಾರಿಗಳ ಸಮಕ್ಷಮದಲ್ಲಿ ಒಂದು ಟನ್ ಕಬ್ಬಿಗೆ 1950 ರೂ. ದರ ನಿಗದಿಪಡಿಸಲಾಗಿತ್ತು. ಆದರೆ, 4 ಕಂಪನಿಗಳು, ಎಸ್.ಸಿ. ಮಲ್ಲಯ್ಯ ಕಂಪನಿ, ಚಾಮುಂಡೇಶ್ವರಿ ಕಂಪನಿ ಮತ್ತು ಐಸಿಎಲ್ ಕಂಪನಿಗಳು, ಎಲ್ಲಾ ಕಂಪನಿಗಳು 1950 ರೂ.ಗಳನ್ನು ಪಾವತಿ ಮಾಡಿವೆ.

ಆದರೆ, ಮಂಡ್ಯ ಸಕ್ಕರೆ ಕಾರ್ಖಾನೆ ಮೈಶುಗರ್ ಸಕ್ಕರೆ ಕಾರ್ಖಾನೆ ಸರ್ಕಾರದ ಕಾರ್ಖಾನೆ. 1,500 ರೂಪಾಯಿ ಮಾತ್ರ ಕೊಟ್ಟು ಇನ್ನೂ ಬಾಕಿ 450 ರೂಪಾಯಿಗಳನ್ನು ಪಾವತಿ ಮಾಡಿಲ್ಲ. ದಯಮಾಡಿ 450 ರೂಪಾಯಿಗಳ ಬಾಕಿ ಹಣ ಕೊಡಬೇಕು. 2010–11 ರ ಸಾಲಿಗೆ ಕಬ್ಬಿನ ದರ ನಿಗದಿ ಮಾಡಬೇಕೆಂದು ನಾವೆಲ್ಲರೂ ಈ ಸರ್ಕಾರವನ್ನು ಒತ್ತಾಯಿಸುತ್ತಿದ್ದೇವೆ.

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) : ಮಂಡ್ಯದ ಮೈಶುಗರ್ ಕಾರ್ಖಾನೆಯು 2009–10 ನೇ ಸಾಲಿನಲ್ಲಿ ಕಾರ್ಖಾನೆಗೆ ಸರಬರಾಜು ಮಾಡಿದ ಕಬ್ಬಿಗೆ ಪ್ರತಿ ಟನ್‌ಗೆ 1,500/– ಗಳಂತೆ ಪೂರ್ಣವಾಗಿ ಪಾವತಿಸಿರುತ್ತದೆ. ಈ ಮಧ್ಯೆ 2010ರ ಜನವರಿ ತಿಂಗಳಲ್ಲಿ ಸಕ್ಕರೆ ಬೆಲೆಯು ಏರಿಕೆಯಾಗಿದ್ದು, ಮಂಡ್ಯ ಜಿಲ್ಲೆಯ ಕಬ್ಬು ಬೆಳೆಗಾರರು ಜಿಲ್ಲೆಯ ಎಲ್ಲಾ ಕಾರ್ಖಾನೆಗಳು ಕಬ್ಬು ಬೆಲೆಯನ್ನು ಏರಿಸಬೇಕೆಂದು